372

1367

# ಮೈಸೂರ ಗೆಜೆಟ್.

ನಂ. 39] ಸರ್ಕಾರವಿಂದ ಘೋಷಿಸಿದ್ದು. [ಸಂ. 35.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 1, ಸನ್ 1904.

## IIIನ ಭಾಗ.

ಮೈಸೂರು ಶ್ರೀಮತ್ ಮಹಾರಾಜರವರ ಗವರ್ನಮೆಂಟ್.

ಲೆಜಿಸ್ಲೆಟಿವ್ ಇಲಾಖೆ.

ಇಸ್ತಿಹಾರ್‌ನಾಮೆ, ನಂ. 1058-41—2, ಮು.

ತಾರೀಖು 6ನೆ ಆಗೆಸ್ಟು 1904.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟೀ ಯವರಿಂದ ಮಾಡಲ್ಪಟ್ಟಿರುವ ಈ ಕೆಳಗಿನ ಬಿಲ್ಡಿಂಗ್ ನಿಬಂಧನೆಗಳು 1903ನೆ ಯ ಇಸವಿಯ IIIನೆಯ ನಂಬರ್ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ರೆಗ್ಯುಲೇಷನಿನ 39ನೆಯ ಪ್ರಕರಣದ 2ನೆಯ ಅಧಿಕರಣಕ್ಕನುಸಾರವಾಗಿ ಪ್ರಕಟಿಸಲ್ಪಟ್ಟಿರುತ್ತವೆ. ಮತ್ತು ಪ್ರಥಮ ಪ್ರಕಟನವಾದ ಮೂರುವಾರಗಳಾದ ಮೇಲೆ ಗವರ್ನ್‌ಮೆಂಟಿನವರಿಂದ ಪರ್ಯಾಲೋಚಿಸಲ್ಪಡುತ್ತವೆ.

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಟರಿ.

1903ನೆ ಇಸವಿಯ IIIನೆ ಅಂದರೆ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ರೆಗ್ಯುಲೇಷನ್ನಿನ 39ನೆ ಪ್ರಕರಣವನ್ನನುಸರಿಸಿ ಮಾಡಲ್ಪಟ್ಟ ಕಟ್ಟಡಗಳ ಬೈಲಾಸ್ ಯಾನೆ ಉಪನಿಬಂಧನೆಗಳು.

ಈ ಉಪನಿಬಂಧನೆಗಳಲ್ಲಿ "ಕಟ್ಟಡ" ಎಂಬ ಪದಕ್ಕೆ, ಯಾವದಾದರು ಮನೆ, ಗುಡಿಸಲು, ಜೋಪಡಿ, ಗೋಡೆ ಅಥವಾ ಮನುಷ್ಯರ ವಾಸಕ್ಕಾಗಿ ಯಾಗಲಿ ಯ ಇತರ ಕಾರ್ಯಕ್ಕಾಗಿ ಯಾಗಲಿ ಉಪಯೋಗಿಸಲ್ಪಡುವ ಚಾವಣೀವುಳ್ಳ ಯ ಇಲ್ಲದ ಆವರಣಗಳು, ಎಂದು ಅರ್ಥವಾಗತಕ್ಕದ್ದು.

"ಬೀದಿ" ಎಂಬುವುದು ಅದರ ಪಾರ್ಶ್ವಭಾಗದ ಚರಂಡಿಗಳನ್ನು ಸಹ ಆಡಗಿಸಿಕೊಂಡಿರತಕ್ಕದ್ದು.

ಕಟ್ಟತಕ್ಕ ಉದ್ದೇಶವನ್ನು ಕುರಿತು ನೋಟೀಸ್ ಕೊಡತಕ್ಕ ವಿಧಾನ.

1. ಯಾವ ಕಟ್ಟಡವನ್ನಾದರು ಕಟ್ಟುವದಕ್ಕಾಗಲಿ ಅಥವಾ ಪುನಹ ಕಟ್ಟುವದಕ್ಕಾಗಲಿ ಉದ್ದೇಶವುಳ್ಳಂಥ ಪ್ರತಿಯೊಬ್ಬ ಮನುಷ್ಯನು, ತನ್ನ ಉದ್ದೇಶವನ್ನು ಕುರಿತು ಲಿಖಿತಮೂಲಕ ಟ್ರಸ್ಟು ಬೋರ್ಡಿನ ಚೇರ್‌ಮೆರಿಗೆ ನೋಟೀಸ್ ಕೊಡತಕ್ಕದ್ದು.

ನೋಟೀಸಿನ ಸಂಗಡ ಕಳುಹಿಸತಕ ದಸ್ತಾವೇಜುಗಳು.

2. (1) ಮೇಲ್ಕಂಡ ನೋಟೀಸಿನ ಸಂಗಡ ಬೋರ್ಡಿನ ಸರ್ವೆಯರ್ (ಯಾನೆ ವಿಚಾರಣೆದಾರರಲ್ಲೊಬ್ಬ) ರಿಂದ, ಬಂದು ಅಂಗುಲಕ್ಕೆ 10 ಅಡಿಗೆ ಕಡಿಮೆಯಿಲ್ಲದಂತೆ ತೆಗೆಯಲ್ಪಟ್ಟಿದ್ದಾಗಿಯೂ, ಮತ್ತು

373



(a) ಜಮೀನಿನ ಮೇಲೆ ಯಾವ ಕಟ್ಟಡಗಳಾದರೂ ಹಾಲಿ ಇದ್ದಲ್ಲಿ, ಅಂಥ ದರೋಬಸ್ತು ಕಟ್ಟಡಗಳ, ಮತ್ತು ಸದರೀ ಜಮೀನಿನ ಮೇಲೆ ಕಟ್ಟಬೇಕಾದ ಕಟ್ಟಡ ವ ಇದಕ್ಕೆ ಸೇರಿದ ಹೊರಗಿನ ಉಪಕಟ್ಟಡಗಳ ಸ್ಥಾನ, ಸ್ವಭಾವ ಮತ್ತು ಉಪಯೋಗವನ್ನು ;

(b) ಉದ್ದೇಶಿಸಿರುವ ಕಟ್ಟಡ ವ ಉಪಕಟ್ಟಡಗಳಿಂದ ಆವರಿತವಾಗತಕ್ಕ ಜಮೀನಿನ ವಿಸ್ತೀರ್ಣವನ್ನು ;

(c) ಪಕ್ಕದಲ್ಲಿರುವ ರಸ್ತೆ, ಬೀದಿ, ಸೇತುವೆ, ಮೊಹರಿ ಯ ಕಟ್ಟಡ, ಇವುಗಳಿಗೆ ಹೆಸರುಗಳು ಯಾವದಾದರೂ ಇದ್ದರೆ, ಆ ಹೆಸರುಗಳನ್ನು ಅಥವಾ ಇವುಗಳ ವಿವರಣೆಯನ್ನು ;

(d) ಇಂಪ್ರೂವ್‌ಮೆಂಟ್ ಕಮಿಟಿ ಯವರಿಂದ ತಯಾರ್ಮಾಡಲ್ಪಟ್ಟ ಮ್ಯಾಪ್ ಯಾನೆ ಪಕಗಳಲ್ಲಿ ವ ತಟ್ಟೆಗಳಲ್ಲಿ ಆ ಜಾಗಕ್ಕೆ ಕಾಣಿಸಿರುವ ನಂಬರನ್ನು, ಮತ್ತು ಸದರಿ ಜಮೀನು ಇರತಕ್ಕ ತುಕಡಿ ವ ಬೀದಿ ಅಥವಾ ರಸ್ತೆಯ ಹೆಸರು ಯ ನಂಬರ್‌ಗಳನ್ನು ;

ತೋರಿಸುವದಾಗಿಯೂ ಇರುವ ಆ ಜಮೀನಿನ ಒಂದು ಸೈಟ್ ಪ್ಲ್ಯಾನ್ ಯಾನೆ ಸ್ಥಾನ ನಕ್ಷೆಯನ್ನು, ಅಂಥಾ ಪ್ರತಿಯೊಬ್ಬ ಮನುಷ್ಯನು ಕಳುಹಿಸಿಕೊಡತಕ್ಕದ್ದು.

(2) (a) ಜಮೀನು ಸರ್ಕಾರ, ಮ್ಯುನಿಸಿಪಾಲಿಟಿ, ಅಥವಾ ಟ್ರಸ್ಟಿಗೆ ಕೇದಿದ್ದಾಗಿದ್ದರೆ, ಅಂಥಾ ಪ್ರತಿಯೊಬ್ಬ ಮನುಷ್ಯನು ಮೇಲ್ಕಂಡ ನೋಟೀಸ್ ನೊಂದಿಗೆ, ಸದರಿ ಜಮೀನನ್ನು ಅನುಭವಿಸಲು ತನಿಗೆ ಅಧಿಕಾರವನ್ನು ಕಲ್ಪಿಸಿರುವ ದಸ್ತೈವೇಜು ಯ ದಸ್ತೈವೇಜುಗಳ ಪ್ರಾಮಾಣಿಕ ನಕಲನ್ನು, ಮತ್ತು ಟ್ರಸ್ಟಿಗಳು ಸದರಿ ದಸ್ತೈವೇಜು ಯ ದಸ್ತೈವೇಜುಗಳನ್ನು ನೋಡಲಿಕ್ಕೆ (ಇರಾವೆಪಟ್ಟು) ಅಬ್ಜೆಕ್ಟ್ ಅವರು ಖಾಯಿಷ್ ಮಾಡಿದಲ್ಲಿ, ಅಸಲು ದಸ್ತೈವೇಜು ಯ ದಸ್ತೈವೇಜುಗಳನ್ನು ಕಳುಹಿಸಿಕೊಡತಕ್ಕದ್ದು.

(b) ಮೇಲ್ಕಂಡ ಪ್ರಮಾಣಿಕ ನಕಲುಗಳು ಸಂದರ್ಭಾನುಸಾರ, ಡೆಪ್ಯುಟಿ ಕಮಿಷನರ್‌ರಿಂದಲಾಗಲಿ, ಮ್ಯುನಿಸಿಪ್ಯಾಲಿಟಿ ಪ್ರೆಸಿಡೆಂಟ್ ಯ ವೈಸ್‌ಪ್ರೆಸಿಡೆಂಟ್‌ರಿಂದಲಾಗಲಿ, ಅಥವಾ ಚೇರ್ಮೆರಿಂದಲಾಗಲಿ ದಸ್ಕತ್ ಮಾಡಲ್ಪಡಬೇಕು.

(3) (a) ಮೇಲ್ಕಂಡ ನೋಟೀಸಿನ ಸಂಗಡ, ಜೋರ್ಡಿನ ಸರ್ವೆಯರ್ ಯಾನೆ ಮೋಜಣಿದಾರನಿಂದ ಅಂಗುಲ ಒಂದಕ್ಕೆ ೨೫ ಅಡಿಗೆ ಕಡಿಮೆ ಇಲ್ಲದ ಪ್ರಮಾಣದ ಮೇರಿಗೆ ತೆಗೆಯಲ್ಪಟ್ಟದ್ದಾಗಿಯೂ, ಮತ್ತು ಪಕ್ಕದ ರಸ್ತೆ ಅಥವಾ ಬೀದಿಗಳ ಮೇಲ್ಕಟ್ಟಕ್ಕೆ, ತಳಾದಿಯೂ ಮತ್ತು ಎಲ್ಲಕ್ಕೂ ಕೀಳ್ಪಟ್ಟ ತಳವರೆಗೆ ಯ ಪ್ಲಿಂತ್ ಯಾನೆ ಗದ್ದಿಗೆ ಕಲ್ಲು ಸಹಾ ಯಾವ ಮಟ್ಟದಲ್ಲಿ ಇಡಬೇಕೆಂದು ಉದ್ದೇಶಿಸಲ್ಪಟ್ಟಿರುವದೊ, ಆ ಮಟ್ಟಗಳನ್ನು ಮತ್ತು ಮನೆ ಕಟ್ಟತಕ್ಕ ಸ್ಥಳದ ಮಟ್ಟವನ್ನು ತೋರಿಸುವಂಥಾದ್ದಾಗಿಯೂ, ಇರುವ ಪ್ಲ್ಯಾನ್ಸ್ ಯಾನೆ ನಕ್ಷೆಗಳು, ಸೆಕ್ಷನ್ಸ್ ಯಾನೆ ನಮೂನೆಗಳು, ವ ಎಲಿವೇಷನ್ಸ್ ಯಾನೆ ಪ್ರಮಾಣ ದರ್ಜೆಗಳು, ಇವುಗಳ ದ್ವಿಪ್ರತಿಗಳನ್ನು, ಅಂಥಾ ಪ್ರತಿಯೊಬ್ಬ ಮನುಷ್ಯನು ಹಾಜರ್ಮಾಡತಕ್ಕದ್ದು.

(b) ಉದ್ದೇಶಿಸಿರುವ ಕಟ್ಟಡದ ನೇರಪ್ಪು ಯ ಮುಂಭಾಗವು, ಸದರಿ ಕಟ್ಟಡವು ಎದುರು ನೋಡುವ ಬೀದಿ ಅಥವಾ ರಸ್ತೆಯ ಪಾರ್ಶ್ವಭಾಗದ ಚರಂಡಿಗಾಗಲಿ, ಪಕ್ಕದ ಚರಂಡಿ ಇಲ್ಲದಿದ್ದಲ್ಲಿ ಅಂಥಾ ಬೀದಿ ಅಥವಾ ರಸ್ತೆಯ ಮಧ್ಯ ರೇಖೆಗೆ ಆಗಲಿ ಯಾವ ಸ್ಥಾನದಲ್ಲಿ ನಿಲ್ಲುತ್ತದ್ದೋ ಅದನ್ನು ಸಹಾ ಮೇಲ್ಕಂಡ ಪ್ಲ್ಯಾನ್ಸ್‌ಯಾನೆ ನಕ್ಷೆಗಳು ಮತ್ತು ಸೆಕ್ಷನ್ಸ್‌ಯಾನೆ ನಮೂನೆಗಳು ತೋರಿಸತಕ್ಕದ್ದು.

(4) ಅಂಥಾ ಪ್ರತಿಯೊಬ್ಬ ಮನುಷ್ಯನು ಚೇರ್ಮೆರಿಂದ ಖಾಯಿಷ್ ಮಾಡಲ್ಪಟ್ಟಾಗ, ಮೇಲ್ಕಂಡ ನೋಟೀಸಿನ ಸಂಗಡ, ಕಟ್ಟುವದಕ್ಕೆ ಉದ್ದೇಶಿಸಿರುವ ಕೆಲಸವನ್ನು ಕುರಿತೂನೂ, ಮತ್ತು ತಳಾದಿಗಳಿಗೂ, ಗೋಡೆಗಳಿಗೂ, ವ ಜಾವಣಿಗಳಿಗೂ ಉಪಯೋಗಿಸತಕ್ಕ ಸಾಮಾನುಗಳನ್ನು ಕುರಿತೂನೂ, ತಪ್ಸೀಲ್ ವಿವರಣೆಗಳನ್ನು ಕಳುಹಿಸಿಕೊಡತಕ್ಕದ್ದು.

3. ಈ ನಿಬಂಧನೆಗಳ ಯ ಅವುಗಳ ಅನಕ್ಯಕತೆಗಳ ಸಂಬಂಧವಾದ ಯಾವದಾದರು ವಿಷಯದ ಸರಿಯಾದ ಅಭಿಪ್ರಾಯ ಯ ಅರ್ಥದ ವಿಚಾರವಾಗಿ ಯಾವ ಮನುಷ್ಯನಿಗಾದರು ತೊಡಕು ಯ ಸಂದೇಹವೇನಾದರೂ ಇದ್ದರೆ, ಅಂಥಾವನು ಯಾವದಾದರು ಕಟ್ಟಡವನ್ನು ಕಟ್ಟುವದಕ್ಕಾಗಲಿ ಅಥವಾ ಪುನಶ್ಚ ಕಟ್ಟುವದಕ್ಕಾಗಲಿ ತನ್ನ ಉದ್ದೇಶವನ್ನು ಕುರಿತು ಲಿಖಿತಮೂಲಕ ನೋಟೀಸನ್ನು ಕೊಡುವದಕ್ಕೆ ಮುಂಚಿತವಾಗಿ, ಚೇರ್ಮೆರಿಗೆ ದರಖಾಸ್ತು ಮಾಡಿಕೊಳ್ಳಬಹುದು. ಅಂಥಾ ದರಖಾಸ್ತು ತಲುಪಲು, ಚೇರ್ಮೆರು ಸದರಿ ಮನುಷ್ಯನಿಗೆ ಆಯಾ ಸಂದರ್ಭಗಳಲ್ಲಿ ಅವಶ್ಯಕವಾಗಿರುವ ತಿಳುವಳಿಕೆಯನ್ನು ಕೊಡತಕ್ಕದ್ದು.

4. ಮಲ ಮುಂತಾದ ವಸ್ತುಗಳಿಂದಲಾಗಲಿ, ಸತ್ತ ಮೃಗಗಳ ಶವಗಳಿಂದಲಾಗಲೀ, ಅಥವಾ ಕಚರ ಯ ಉಪದ್ರಕರವಾದ ಇತರ ವಸ್ತುವಿನಿಂದಲಾಗಲೀ ತುಂಬಲ್ಪಟ್ಟಿರುವ ಅಥವಾ ಸದರಿ ವಸ್ತುಗಳನ್ನು ಕೂಡಿಹಾಕತಕ್ಕ ಸ್ಥಳವಾಗಿ ಉಪಯೋಗಿಸಲ್ಪಟ್ಟಿರುವ ಯಾವ ಸ್ಥಳದ ಮೇಲೂ, ಹೊಸ ಕಟ್ಟಡವನ್ನು ಕಟ್ಟತಕ್ಕ ಮನುಷ್ಯನು ಅಂಥಾ ವಸ್ತುಗಳು ಚೇರ್ಮೆರ ತೃಪ್ತಿಕರವಾಗಿ, ಸರಿಯಾಗಿ ತೆಗದುಹಾಕಲ್ಪಟ್ಟಿಹೊರ್ತು, ಅಥವಾ ಸದರಿ ವಸ್ತುಗಳು ದುರ್ಗುಣರಹಿತವಾಗಿವೆಯೆಂದು ಅವರು ಅಭಿಪ್ರಾಯಪಟ್ಟಿಹೊರ್ತು, ಯಾವ ಹೊಸ ತಳಾವಿಯನ್ನು ಹಾಕತಕ್ಕದ್ದಲ್ಲವು.

ಕಚರಾವನ್ನು ಹೊಸ ತಳಾದಿಗಳಿಂದ ಆಚೆಗೆ ಸಾಗಿಸತಕ್ಕದ್ದು.

374

1369

5. ಮ್ಯುನಿಸಿಪಲ್ ರೆಗ್ಯುಲೇಷನ್ನಿನ 115, 116 ನ 148ನೆ ಪ್ರಕರಣಗಳ ಅರ್ಥದನುಸಾರವಾಗಿ ಕಟ್ಟಡಗಳನ್ನು ಕಟ್ಟುವ ಪ್ರತಿಯೊಬ್ಬ ಮನುಷ್ಯನು, ಕಟ್ಟಡದ ತಳಾದಿ ಯಾವದನ್ನಾದರೂ ತುಂಬಲು ಉಪಕ್ರಮಿಸುವದಕ್ಕೆ ಮುಂದಾಗಿ, ಅಂಥಾ ತಳಾದಿಯನ್ನು ಅಂಥಾ ಮನುಷ್ಯನು ತುಂಬಲು ಉಪಕ್ರಮಿಸುವ ತೇದಿಯನ್ನು ನಮೂದಿಸಿ ಬರಹ ಮೂಲಕ ನೋಟೀಸನ್ನು ಜೇರ್ಮೆರಿಗೆ, ಅವರೆ ಆಫೀಸಿನಲ್ಲಿ ಪಾವತಿ ಮಾಡತಕ್ಕದ್ದು ಯ ಕಳುಹಿಸತಕ್ಕದ್ದು. ಅಥವಾ ಪಾವತಿಯಾಗುವಂತೆ ಯ ಕಳುಹಿಸುವಂತೆ ಮಾಡತಕ್ಕದ್ದು.

ಕಟ್ಟಡಗಳನ್ನು ಕಟ್ಟುವದಕ್ಕೆ ಉದ್ದೇಶಿಸುವ ಜನರಿಂದ ಕೆಲವು ನೋಟೀಸುಗಳು ಕೊಡಲ್ಪಡಬೇಕಾದ ವಿಷಯ.

ತಳಾದಿಗಳನ್ನು ಮುಚ್ಚುವದರ ವಿಷಯವಾಗಿನೋಟೀಸು.

6. ವಾಸಕ್ಕಾಗಿ ಹೊಸಕಟ್ಟಡವನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು ಸುತ್ತಲಿರುವ ಭೂಮಿಯ ಸಾಮಾನ್ಯ ಮಟ್ಟದ ಮೇಲೆ $1\frac{1}{4}$ ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಪಾರ್ಶ್ವ ಭಾಗದ ಚರಂಡಿಯ ಮೇಲ್ಭಾಗವನ್ನು ಮಿಾರಿ $1\frac{1}{2}$ ಅಡಿಯಪ್ಪು ಇರುವಂತೆಯೂ, ಪ್ಲಿಂತ್‌ಯಾನೆ ಗದ್ದಿಗೆ ಕಲ್ಲನ್ನು ಇಟ್ಟು ಸದರಿ ಕಟ್ಟಡವನ್ನು ಕಟ್ಟಿಸತಕ್ಕದ್ದು.

ಪ್ಲಿಂತ್‌ಯಾನೆ ಗದ್ದಿಗೆಕಲ್ಲಿನ ಮಟ್ಟ.

7. ಹಿಂದಿನ ಪ್ರಕರಣಗಳ ನಿಬಂಧನೆಗಳನ್ನನುಸರಿಸಿ, ಜೇರ್ಮೆರಿಗೆ ಯಾವದಾದರೂ ಪ್ಲ್ಯಾನ್ಯಾನೆ ನಕ್ಷೆಯ ಇತರ ದಸ್ತೈವೇಜನ್ನು ಬದಗಿಸಬೇಕೆಂದು ಖಾಯಿಷ್ಮಾಡಲ್ಪಡುವ ಪ್ರತಿಯೊಬ್ಬ ಮನುಷ್ಯನು, ತಾನು ಬದಗಿಸಬೇಕೆಂದು ಅನುಜ್ಞೆಸಲ್ಪಟ್ಟಂಥ ಪ್ರತಿಯೊಂದು ಪ್ಲ್ಯಾನ್ಯಾನೆ ನಕ್ಷೆ ಅಥವಾ ಇತರ ದಸ್ತೈವೇಜಿನ ನಕಲುಗಳ ದ್ವಿಪ್ರತಿಗಳನ್ನು ಬದಗಿಸತಕ್ಕದ್ದು. ಅಂಥಾ ಪ್ಲ್ಯಾನ್ಯಾನೆ ನಕ್ಷೆ ಯ ಇತರ ದಸ್ತೈವೇಜುಗಳ ದ್ವಿಪ್ರತಿಗಳ ಪೈಕಿ, ಜೇರ್ಮೆರಿಂದ ಸದರಿ ಪ್ಲ್ಯಾನ್ಯಾನೆ ನಕ್ಷೆಯು ಮಂಜೂರಾಗಿರುವದನ್ನು, ಇಲ್ಲದಿರುವದನ್ನು ಸೂಚಿಸುವಂತೆ, ಒಂದು ಪ್ರತಿಯು ಅವರಿಂದ ದಸ್ಕತು ಮಾಡಲ್ಪಟ್ಟು ಸದರಿ ಮನುಷ್ಯನಿಗೆ ವಾಪಸು ಮಾಡಲ್ಪಡತಕ್ಕದ್ದು. ಕಟ್ಟಡದ ಅಂದಾಜಿನ ಬೆಲೆಮೇಲೆ ಕೇಕಡ $\frac{1}{4}$ರ ಮೇರಿಗೆ ವಾವತಿಯಾದಲ್ಲಿ, ಜೇರ್ಮೆರಿನ ಸರ್ವೆಯರ್ ಯಾನೆ ಮೋಜಣಿದಾರನ್ನು, ಅವಶ್ಯಕವಾದ ಮೋಜಣಿಗಳನ್ನು ಮತ್ತು ಮಟ್ಟಗಳನ್ನು ತೆಗೆಯುವಂತೆ ಆಜ್ಞಾಪಿಸಲ್ಪಡುವನು.

8. ಯಾವ ಹೊಸಕಟ್ಟಡದ ರಸ್ತೆಕಡೆಯ ಗೋಡೆ ಪಾಯವು ಪಾರ್ಶ್ವಭಾಗದ ಚರಂಡಿಯಿಂದ $1\frac{1}{2}$ ಅಡಿಯಪ್ಪು ಬಿಡದಿರುವದೋ, ಅಂಥಾ ಹೊಸಕಟ್ಟಡವು ಯಾವ ಮನುಷ್ಯನಿಂದಲೂ ಕಟ್ಟಲ್ಪಡಕೂಡದು. ಅಂಥಾ ಕಟ್ಟಡದ ಪ್ರತಿಯೊಂದು ಗೋಡೆಯು, ಮತ್ತು ಕೆಳಗಿನ ನೆಲದ ಪ್ರತಿಯೊಂದು ಕಂಭವು ಯಾ ಕಂಭಗಳು ಗಟ್ಟಿಯಾದ ನೆಲದಮೇಲೆಯಾದರೂ, ಸಾಕಾದಪ್ಪು ಮಂದವುಳ್ಳ ಕಾಂಕ್ರೀಟ್‌ಯಾನೆ ವಜ್ರಗಾರೆ ಮೇಲೆಯಾದರೂ, ಅಥವಾ ತಳಾದಿಯಲ್ಲಿರುವ ಯಾವದಾದರೂ ಬಲವಾದ ಮತ್ತು ಸಾಕಾದ ಕೆಳಕಟ್ಟೆಯ ಮೇಲೆಯಾದರೂ ನಿಲ್ಲತಕ್ಕದ್ದು. ಅಲ್ಲದೆ, ಬೇಕಾದ ಸಂದರ್ಭಗಳಲ್ಲಿ ಪಾಯಗಳಿಗೆ ಫ್ರೂಬಿಂಗ್ಸ್‌ಯಾನೆ ನೆಲೆಗಳು ಇಡಲ್ಪಡತಕ್ಕದ್ದು.

ಗೋಡೆಗಳ ಪಾಯಗಳು.

9. ಹೊಸ ವಾಸದ ಮನೆಯನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ವಾಸದ ಮನೆಯನ್ನು, ವಾಸಮಾಡುವದಕ್ಕೆ ಉದ್ದೇಶಿಸಲ್ಪಟ್ಟಿರುವ ಅದರ ಪ್ರತಿಯೊಂದು ಕೊಠಡಿಯ ಎಲ್ಲಾಭಾಗವು, ಯಾವ ಕನಿಷ್ಠಪಕ್ಷ ಬಂದು ಪಕ್ಕವು ಹೊರಗಿನ ಬೈಲು ಪ್ರದೇಶಕ್ಕೆ ಬತ್ತಿಕ್ಕೊಂಡಿರುವ ಹೊರಪಾರ್ಶ್ವದ ಗೋಡೆಯಾಗಿ ಇರತಕ್ಕದ್ದಾಗಿಯಾದರೂ, ಅಥವಾ ಬಳಿಗಿನ ಖಾಲಿ ಜಾಗಾಕ್ಕೆ ಬತ್ತಿಕೊಂಡಿರುವ ಎಲ್ಲಾ ಕೊಠಡಿಗಳ ಒಟ್ಟು ನೆಲವಿಸ್ತೀರ್ಣದ ದಶಾಂಶಕ್ಕೆ ಕಡಿಮೆ ಇಲ್ಲದಪ್ಪು ವಿಸ್ತಾರವನ್ನುಳ್ಳದ್ದಾಗಿಯೂ, ಯಾವ ವಿಕ್ಷಿನಲ್ಲೂ ಅಡ್ಡಳತೆ 6 ಅಡಿಗಳಿಗೆ ಕಡಿಮೆ ಇಲ್ಲದಂತೆಯೂ, ಇರುವ ಬಳ ಅಂಗಣಕ್ಕೆ ಬತ್ತಿಕೊಂಡಿರುವಂಥಾದ್ದಾಗಿಯಾದರೂ, ಇರುವಂತೆ ಕಟ್ಟತಕ್ಕದ್ದು.

ವಾಸದ ಮನೆಗಳ ಸುತ್ತ ಇರಬೇಕಾದ ಬೈಲು ಪ್ರದೇಶಗಳು.

10. ಅಂಥವನು ಹೊರಪಾರ್ಶ್ವದ ಕನಿಷ್ಠಪಕ್ಷ ಎರಡು ಗೋಡೆಗಳಿಗೂ ಮತ್ತು ಮಾಲೀಕನ ವಶಾರದ ಹದ್ದುಗಡಿಗೂ ಮಧ್ಯೆ, ಅಂಥ ಗೋಡೆಗಳಲ್ಲಿ ಯಾವದಾದರು ಒಂದು ಅಡ್ಡಗಲದಲ್ಲಿ 15 ಅಡಿಗಿಂತಲೂ ಕಡಿಮೆಯಾಗಿರದಿರುವ ಬೀದಿಗೆ ಅಭಿಮುಖವಾಗಿ ಇದ್ದಜೊತ್ತು, ಅಂಥ ಗೋಡೆಯ ಉದ್ದಕ್ಕೂ ವಿಸ್ತರಿಸತಕ್ಕ, ಅಥವಾ ಕನಿಷ್ಠಪಕ್ಷ 6 ಅಡಿ ಅಡ್ಡಗಲವುಳ್ಳ ಖಾಲಿ ಜಾಗವನ್ನು ಬಿಡತಕ್ಕದ್ದು. ಈ ಉಪನಿಬಂಧನೆಯಿಂದ ನಿರ್ದೇಶಿಸಲ್ಪಡುವ ಪ್ರತಿಯೊಂದು ಬಳ ಅಂಗಣವನ್ನು, ಅಂಥವನು ಕಲ್ಪಿಸಿ, ಯಾವ ಕಟ್ಟಗಳೂ ಅವರಲ್ಲಿರದಂತೆಯೂ ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟಿರುವಂತೆಯೂ ಅದನ್ನು ಇಡಿಸತಕ್ಕದ್ದು. ಮತ್ತು ಕಪೋತ, ಚಾವಣಿ, ಯ ಗಾಳಿಮರೆ, ಇವು ಯಾವದೂನೂ ಮೇಲ್ಕಂಡ ಖಾಲಿ ಜಾಗದ ಯಾವ ಕಡೆಯಲ್ಲೂ ಬಂದು ಅಡಿ 6 ಅಂಗುಲಗಳಿಗಿಂತ ಮಿಾರಿ ಮುಂದಕ್ಕೆ ಉಬ್ಬಿಕೊಂಡಾದರೂ ಅಥವಾ ಮೇಲಿನಿಂದ ಬೊಗ್ಗಿಕೊಂಡಾದರೂ ಇರಕೂಡದು. ಆದರೆ, ಈ ಕೂಡಿಸತಕ್ಕ ಹಾದಿಗಳು ಬಂದು, ಯ ಎರಡು ಪಕ್ಕಗಳಲ್ಲಿ ಖಾಲಿ ಬಿಡಲ್ಪಟ್ಟದ್ದಲ್ಲಿ, ಅಂಥಾ ಯಾವ ಹಾದಿಗಳನ್ನು ಜೇರ್ಮೆರು ಅವಶ್ಯಕವೆಂದು ಎಣಿಸುವರೊ ಅಂಥವುಗಳು ಇಡಲ್ಪಡಬಹುದು.

11. ಬಡಾವಣೆಗಳಲ್ಲಿ, 30 ಅಡಿ ಅಗಲ 50 ಅಡಿ ಉದ್ದಕ್ಕೆ ಕೆಡಿಮೆಯಾದ ಜಾಗಾಗಳ ಮೇಲೆ, ಯಾವ ಕಟ್ಟಡವೂ ಕಟ್ಟಲ್ಪಡಲಾಗದು.

ಕೊಠಡಿಗಳ ಉನ್ನತ.

12. ಅಂಥ ಕಟ್ಟಡದಲ್ಲಿ ವಾಸಕ್ಕೆಂದು ಉದ್ದೇಶಿಸಿರುವ ಪ್ರತಿಯೊಂದು ಕೊಠಡಿಯನ್ನು ಅಂಥವನು ಅದರ ಮಾಳಿಗೆಯಲ್ಲಿನ ಒಂದು ಕೊಠಡಿವಿನಹ, ನೆಲದಿಂದ ಅಟ್ಟದವರಿಗೆ ಪ್ರತಿಭಾಗವು ಕನಿಷ್ಠಪಕ್ಷ 8 ಅಡಿ ಎತ್ತರವಾಗಿರುವಂತೆ ಕಟ್ಟತಕ್ಕದ್ದು.

13. ಅಂಥ ಕಟ್ಟಡದ ಅಂಥ ಮಾಳಿಗೆಯಲ್ಲಿನ ಪ್ರತಿಯೊಂದು ಕೊಠಡಿಯನ್ನು, ಅಂಥವನು ಸದರಿ ಕೊಠಡಿಯು ತಳವರ ಸೆಯಿಂದ ಆಟ್ಟದವರಿಗೆ ಕನಿಷ್ಠಪಕ್ಷ ಸರಾಸರಿ 7 ಅಡಿ ಎತ್ತರವನ್ನು ಉಳ್ಳದ್ದಾಗಿರುವಂತೆ ಕಟ್ಟುತಕ್ಕದ್ದು.

14. ಕಟ್ಟಡಗಳ ಸೂರುಗಳು, ಕಿಟಕಿಗಳ ಸರ್ಷೇಡಿಯಾನೆ ಬಿಸಲು ಮರೆಗಳು, ಮಾಳಿಗೆಯ ನೀರನ್ನು ಹಾಯಿಸುವ ದೋಣಿಗಳು, ಮನೆಯ ಅಂಚಿನಲ್ಲಿರುವ ರಸ್ತೆಯ ಪಾರ್ಶ್ವಭಾಗದ ಚರಂಡಿಯನ್ನು ಅತಿಕ್ರಮಿಸಿ ಮುಂದಕ್ಕೆ ಬರಕೂಡದು.

15. ರಸ್ತೆಯಿಂದ ಫ್ಲಿಂತ್‌ಯಾನೆ ಗದ್ದಿಗೆ ಕಲ್ಲಿನ ಮೇಲಕ್ಕೆ ಹೋಗತಕ್ಕ ಮೆಟ್ಟಿಲುಗಳು ರಸ್ತೆಯ ಪಾರ್ಶ್ವಭಾಗದ ಚರಂಡಿಯ ಹೊರಗಡೆಯ ಅಂಚನ್ನು ಬಿಟ್ಟು ಮುಂದಕ್ಕೆ ಬರತಕ್ಕದ್ದಲ್ಲವು.

16. ರಸ್ತೆಯ ಪಾರ್ಶ್ವಭಾಗದ ಚರಂಡಿಯ ಹೊರಅಂಚಿನಿಂದಾಚಿಗೆ ಹಂಗಾಮಿಯಾದ ಯ ಖಾಯಂ ಆದ ಸರ್ಷೇಡಿಯಾನೆ ಬಿಸಲು ಮರೆಗಳ್ವಾವದೂ ಅಂಗಡಿಗಳಿಗೆ ಹಾಕಲ್ಪಡಕೂಡದು.

17. ಚಾವಣಿ ವರಿಗೂ ಎತ್ತಲ್ಪಡದಿರುವ ಬಂದು ವಿಭಾಗದ ಗೋಡೆ ಮುಖಾಂತರವಾಗಿಯಾಗಲೀ, ಅಥವಾ ಸಂಸರ್ಗವನ್ನು ಸುತರಾಂ ತಡೆಯುವದಕ್ಕಾಗದಿರುವಂಥ ಯಾವ ವಿಧದಿಂದಾಗಲೀ, ಬಂದು ಕೊಠಡಿಯಿಂದ ಮತ್ತೊಂದು ಕೊಠಡಿಗೆ ಮಾರ್ಗವಿದ್ದ ವಿನಹಾ, ಪ್ರತಿಯೊಂದು ಕೊಠಡಿಯನ್ನು, ಬಂದೊಂದು 80 ಚದರಡಿಗೆ ಕಡಿವೆ ಇಲ್ಲದ ನೆಲ ವಿಸ್ತೀರ್ಣವುಳ್ಳದ್ದಾಗಿ ಕಟ್ಟುತಕ್ಕದ್ದು.

ಕೊಠಡಿಗಳ ನೆಲ ವಿಸ್ತೀರ್ಣ.

18. ಅಂಥವನು, ಅಂಥ ಪ್ರತಿಯೊಂದು ಕೊಠಡಿಯನ್ನು, ನೇರವಾಗಿ ಹೊರಗಡೆಯ ಗಾಳಿಗೆ ತೆರೆಯತಕ್ಕ ಮತ್ತು ತಳವರಿಸೆ ಪ್ರದೇಶದ ವಿಸ್ತೀರ್ಣದಲ್ಲಿ ವಟ್ಟಿಗೆ ದಶಾಂಶಕ್ಕೆ ಕಡಿವೆ ಇಲ್ಲದವಷ್ಟು ಖುಲ್ಲಾ ಇರತಕ್ಕ ಕಿಟಕಿಗಳದ್ವಾರಗಳ ಮುಖಾಂತರ, ಸದರಿ ಕೊಠಡಿಗೆ ಗಾಳಿಯು ಬೀಸುತ್ತಿರುವಂತೆ, ಕಟ್ಟುತಕ್ಕದ್ದು.

ಕೊಠಡಿಗಳ ಗಾಳಿ ಚಲನೆ.

19. ಪ್ರತಿಯೊಬ್ಬ ಮನೆ ಎಜಮಾನನು ತಾನು ಒಕ್ಕಲಿರುವ ಮನೆಯನ್ನು ಮತ್ತು ಅದಕ್ಕೆ ಲಗತ್ತಾದ ಜಮೀನುಗಳನ್ನು ಕಾಪಾಡಿಕೊಂಡು ಬರಲಿಕ್ಕೆ ಬದ್ಧನಾಗಿರುತ್ತಾನೆ. ಮನೆ ವ ಅದಕ್ಕೆ ಕೀರಿದ ಜಮೀನುಗಳ ಮಟ್ಟದ ನೀರುವಾಟಕ್ಕೆ ಅನುಗತವಾಗಿ ಬರಿಯುವ ಅತ್ಯಂತ ಸಮೀಪದಲ್ಲಿರತಕ್ಕ ಬೀದಿಯ ಚರಂಡಿಗೆ ಮಾಳಿಗೆಯ ನೀರು ವ ಬಚ್ಚಲು ರೊಚ್ಚು ಸಾಗಿ ಬೀಳುವಂತೆ, ಸದರಿ ಮನೆ ವ ಮನೆಯ ಮೈದಾನದ ನೀರು ಹರಿದು ಹೋಗುವದಕ್ಕೋಸ್ಕರ ಜೇರ್ಮೆರಿಂದ ನಿಯಮಿಸಲ್ಪಡುವ ನಿರ್ಣಯದ ಮೇರಿಗೆ ಇರತಕ್ಕ ಬಂದು ಅನುಕೂಲವಾದ ಚರಂಡಿಯನ್ನು ಉಂಟುಮಾಡ್ದಾಗಿ, ದರೋಬಸ್ತು ವಹಾರಗಳು ಇರತಕ್ಕದ್ದು. ಮನೆಯ ಮಾಲೀಕನು ಅವಶ್ಯಕವಾದ ಚರಂಡಿ ಯ ಚರಂಡಿಗಳನ್ನು ಕಟ್ಟತಕ್ಕ ಬಗ್ಗೆ ಜೇರ್ಮೆರಿಂದ ಕೊಡಲ್ಪಡುವ ನೋಟೀಸ್ ತನಿಗೆ ಜಾರಿಯಾದ ತಾರೀಖು ಲಾಗಾಯಿತು 30 ದಿವಸಗಳ ಒಳಗಾಗಿ ಅಂಥ ಚರಂಡಿಗಳನ್ನು ಒದಗಿಸುವದಕ್ಕೂ ವ ಕಟ್ಟುವದಕ್ಕೂ ಬದ್ಧನಾಗಿರುತ್ತಾನೆ. ತಪ್ಪಿದಲ್ಲಿ, ನಷ್ಟಕ್ಕೂ ಲಾಗವಡಿಗೂ, ಮಾಲೀಕನನ್ನು ಗುರಿಪಡಿಸಿ, ಅವಶ್ಯಕವಾದ ಚರಂಡಿ ಯ ಚರಂಡಿಗಳನ್ನು ಕಟ್ಟುವದಕ್ಕೆ ಅಪ್ಪಣೆ ಮಾಡಲು ಬೋರ್ಡಿನವರು ಅರ್ಹರಾಗಿರುವರು.

ವಹಾರಗಳನ್ನು ಕಾಪಾಡಿಕೊಂಡು ಬರುವಿಕೆ.

20. ಮನುಷ್ಯರ ವಾಸಕ್ಕಾಗಿಯಾದರೂ ಯ ಲಾಯಗಳಿಗಾದರೂ ಯ ಬೇರೆ ಯಾವಕೆಲಸಗಳಿಗಾದರೂ ಉಪಯೋಗಿಸಲ್ಪಡಬೇಕೆಂದಿರುವ ಗುಡಸಲುಗಳು ಯ ಜೋಪಡಿಗಳು ಅಥವಾ ಗುಡಸಲುಗಳ ಯ ಜೋಪಡಿಗಳ ಸಾಲುಗಳು ಯ ಗುಂಪುಗಳು, ಇವುಗಳನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥಪುಗಳನ್ನು, ಜೇರ್ಮೆರು ಅಪೇಕ್ಷಿಸಿದಲ್ಲಿ, ಅವುಗಳು ಕ್ರಮವಾದ ಶ್ರೇಣಿಗಳಾಗಿರುವಂತೆಯೂ :

ಗುಡುಸಲುಗಳು, ಜೋಪಡಿಗಳು ಯ ಸಾಲ್ತಟ್ಟಡಗಳು.

1) ಅಂಥ ಪ್ರತಿ ಎರಡು ಶ್ರೇಣಿಗಳ ಮುಂಗಡೆಯೂ, ಮಧ್ಯದಲ್ಲಿಯೂ, ಗಾಳಿ ಬೀಸುವದಕ್ಕೂ ಮತ್ತು ಕಚರಾ ಎತ್ತುವದು ಸುಲಭವಾಗುವದಕ್ಕೂ ಎಷ್ಟು ಅಗಲವಿರಬೇಕೆಂದು ಜೇರ್ಮೆರು ಅಪ್ಪಣೆ ಮಾಡುತ್ತಾರೋ ಅಷ್ಟು ಅಗಲವುಳ್ಳಂಥ ಧಾರಾಳವಾದ ದಾರಿ ಯ ಮಾರ್ಗವನ್ನು ಉಂಟುಮಾಡ್ದಾಗಿಯೂ ;

(2) ಜೇರ್ಮೆರು ಅಪೇಕ್ಷಿಸುವಂಥ ವ ಅಪೇಕ್ಷಿಸುವಷ್ಟು ಪಾಯಿಖಾನೆಗಳು, ಕಕ್ಕಸುಗಳು ಯ ಪಿಷಾಬ್‌ಖಾನೆಗಳು ಮತ್ತು ಬಚ್ಚಲು ನೀರು ಹರಿದು ಹೋಗಲಿಕ್ಕೆ ಆಧಾರಗಳು, ಇವುಗಳನ್ನು ಉಂಟುಮಾಡ್ದಾಗಿಯೂ ;

(3) ನೀರು ಹರಿದು ಹೋಗುವ ಅನುಕೂಲಕ್ಕೆ ಸಾಕಾದಷ್ಟು ಮಟ್ಟದಲ್ಲಿರುವಂಥಾದ್ದಾಗಿಯೂ ; ಕಟ್ಟುತಕ್ಕದ್ದು.

ಪಾಯಿಖಾನೆಗಳನ್ನು ಕಟ್ಟತಕ್ಕ ವಿಷಯ ಪಾಯಿಖಾನೆಯ ವಸತಿ.

21. ಬಂದು ಹೊಸಕಟ್ಟಡವನ್ನು ಕಟ್ಟತಕ್ಕ ಮನುಷ್ಯನು ಅಂಥ ಕಟ್ಟಡ ಸಂಬಂಧವಾಗಿ, ಆಯಾ ಸಂದರ್ಭದಲ್ಲಿ ಜೇರ್ಮೆರಿಂದ ನಿರ್ಧರಿಸಲ್ಪಟ್ಟು, ಅವಶ್ಯಕವಾಗಿರುವಷ್ಟು ಪಾಯಿಖಾನೆ ಯ ಪಾಯಿಖಾನೆಗಳನ್ನು ಕಟ್ಟತಕ್ಕದ್ದು.

ಪಾಯಿಖಾನೆಗಳ ಜಾಗ.

22. ಬಂದು ಕಟ್ಟಡದ ಸಂಬಂಧವಾಗಿಯಾಗಲಿ, ಅಥವಾ ಸಂಬಂಧವಿಲ್ಲದೆಯಾಗಲಿ, ಹೊಸ ಪಾಯಿಖಾನೆಯನ್ನು ಕಟ್ಟತಕ್ಕ ಮನುಷ್ಯನು, ಅಂಥ ಪಾಯಿಖಾನೆಯನ್ನು ಜೇರ್ಮೆರಿಂದ ಮಂಜೂರ್ಮಾಡಲ್ಪಡುವ ಜಾಗ ಯಾ ಸ್ಥಳದಲ್ಲಿಯೇ ಕಟ್ಟತಕ್ಕದ್ದು.

23. ಬಂದು ಕಟ್ಟಡದ ಸಂಬಂಧವಾಗಿ, ಯಾವ ಮನುಷ್ಯನು ಪಾಯಿಖಾನೆಯನ್ನು ಕಟ್ಟುವನೋ ಅಂಥವನು 127/ ಜೇರ್ಮೆರ್ ಬರಹಮೂಲಕವಾದ ಅಪ್ಪಣೆ ಇಲ್ಲದೆ, ಯಾವದಾದರೂ ಭಾವಿಗೆ, ಬುಗ್ಗೆಗೆ, ಕೆರೆಗೆ ಅಥವಾ ಕುಡಿಯುವದಕ್ಕಾಗಲಿ, ಯಾ ಗೃಹಕೃತ್ಯದ ಕೆಲಸಗಳಿಗಾಗಲಿ, ಯಾ ಮನುಷ್ಯನ ಉಪಯೋಗಕ್ಕೆ, ತಯಾರಾಗತಕ್ಕ ಪಾನಗಳಿಗಾಗಲಿ ಮನುಷ್ಯನಿಂದ ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ನೀರಿನ ಕಾಲುವೆ 20 ಅಡಿ ಫಾಸಲೆಯೊಳಗಾದರೂ, ಅಥವಾ ಅಂಥ ನೀರನ್ನು ಕೆಡಿಸಲು ಆಸ್ಪದವನ್ನು ಉಂಟುಮಾಡುವಂಥ ಬೇರೆ ಯಾವ ಸ್ಥಳದಲ್ಲಿ ಯಾದರೂ, ಅಂಥ ಪಾಯಿಖಾನೆಯನ್ನು ಕಟ್ಟಕೂಡದು.

ನೀರಿನ ಸರಬರಾಯಿನ ಎಡೆಗೆ ಪಾಯಿಖಾನೆಗಳು ಸಮೀಪದಲ್ಲಿರುವಿಕೆ.

24. ಬಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಕ್ಕಸನ್ನು ಅದರ ಪ್ರವೇಶದ ಕಡೆ ವಿನಹ ಪ್ರತಿಯೊಂದು ಕಡೆಯಲ್ಲೂ, ಅಡ್ಡಗಲದಲ್ಲಿ 3 ಅಡಿಗೆ ಕಡಿಮೆ ಇಲ್ಲದ, ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟು; ಖಾಲಿ ಸ್ಥಳವು ಬಿಟ್ಟಿರುವಂತ ಕಟ್ಟತಕ್ಕದ್ದು. ಅಂಥ ಪ್ರವೇಶದ ಕಡೆ, ಅಂಥ ಕಕ್ಕಸಿನೊಳಗೆ ಹೋಗುವ ಗ್ಯಾಲರಿ ಯಾನೆ ಅಂತರ್ದ್ವಾರ ಯಾ ಮಾರ್ಗವು, ಅಗಲದಲ್ಲಿ 2 ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಉಭಯ ಪಾರ್ಶ್ವದಲ್ಲೂ ಹೊರಗಡೆಯ ಗಾಳಿಗೆ ತೆರೆಯಲ್ಪಟ್ಟದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಸುತ್ತಲು ಇರಬೇಕಾದ ಬೈಲು ಪ್ರದೇಶ.

25. ಬಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು ಜೇರ್ಮೆರ್ಗೆ ಸವಾಧಾನವಾಗುವಂತೆ ಗಾಳಿ ಜಲನೆಗೆ ಸಾಕಾದಷ್ಟು ದ್ವಾರ ಯಾ ದ್ವಾರಗಳನ್ನು ಅಂಥ ಕಕ್ಕಸಿಗೆ ಇಡತಕ್ಕದ್ದು. ಅಂಥ ದ್ವಾರ ಯಾ ದ್ವಾರಗಳು, ಮೇಲ್ಛಾವಣಿಕ್ಕೆ ಸಾಧ್ಯವಾದ ಮಟ್ಟಿಗೂ ಸಮೀಪದಲ್ಲಿರುವದಾಗಿಯೂ, ಮತ್ತು ನೇರವಾಗಿ ಹೊರಗಿನ ಗಾಳಿಯ ಸಂಪರ್ಕವನ್ನು ಉಂಟುಮಾಡುವದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಗಾಳಿಯ ಜಲನೆ.

ಕಕ್ಕಸಿನ ಮೇಲೆ ಯಾವ ಕೊಠಡಿಯು ಕಟ್ಟಲ್ಪಡಕೂಡದು.

26. ಯಾವ ಮನುಷ್ಯನಾದರೂ ಹಳೆ ಯಾ ಹೊಸ ಕಕ್ಕಸಿನ ಮೇಲ್ಗಡೆ ಮತ್ತೊಂದು ಕಕ್ಕಸು ಯಾ ಸ್ನಾನದ ಸ್ಥಳ ಯಾ ಬಚ್ಚಲುಮನೆ, ಇವುಗಳನ್ನು ವಿನಹಾ ಯಾವ ಕೋಡಿಯನ್ನು ಯಾ ಕಟ್ಟಣವನ್ನು ಕಟ್ಟಕೂಡದು.

ಪಾಯಿಖಾನೆ ವಗೈರೆಯ ಗುಂಡಿಗಳನ್ನು ಪಾಕೀಜು ಮಾಡುವಿಕೆ.

27. ಬಂದು ಮನೆಯ ಆವರಣದೊಳಗೆ ಮತ್ತು ಅದರ ಸಮೀಪದಲ್ಲಿ ಇರತಕ್ಕ ಗಲೀಜಾದ ಪಾಯಿಖಾನೆ ಗುಂಡಿಗಳು ವ ರೊಜ್ಜೆ ಗುಂಡಿಗಳು, ವಿಶೇಷ ಸಂದರ್ಭ ಯಾ ಸಂದರ್ಭಗಳಲ್ಲಿ ವಾಯಿದೆಯನ್ನು ಬಡಾಯಿಸತಕ್ಕದ್ದು ಅವಶ್ಯಕವೆಂದು ಜೇರ್ಮೆರ್ರು ಎಣಿಸಿದ ಹೊರ್ತು, ಸದರಿ ಜೇರ್ಮೆರ್ರಿಂದ ಆ ಬಗ್ಯೆ ಕೊಡಲ್ಪಡುವ ನೋಟೀಸಿನ ಎರಡು ದಿನಗಳೊಳಗಾಗಿ, ಪಾಕ್ ಮಾಡಲ್ಪಟ್ಟು ಮುಚ್ಚಲ್ಪಡತಕ್ಕದ್ದು.

ಉಪನಿಬಂಧನೆಗಳಿಗೆ ವಿರುದ್ಧವಾದ ನಡವಳಿಕೆಗಳನ್ನು ತಿದ್ದುಪಡಿ ಮಾಡತಕ್ಕದ್ದು.

28. ಕಟ್ಟಣದ ಕಾವುಗಾರಿ ನಡಿಯುತ್ತಿರುವಾಗಾಗಲೀ, ಅಥವಾ ಕಟ್ಟಡವು ಪೂರೈಸಿದ ಮೇಲಾಗಲೀ ಯಾವದಾದರು ಯುಕ್ತವಾದ ಕಾಲದಲ್ಲಿ, ಜೇರ್ಮೆರ್ರಿಂದ, ಅಂಥಾ ಕಟ್ಟಣದ ಕಟ್ಟುವಿಕೆಯು ಹೊಸ ಕಟ್ಟಡಗಳಿಗೆ ಸಂಬಂಧಿಸುವ ಯಾವದಾದರೂ ಉಪನಿಬಂಧನೆಗೆ ವಿರೋಧವಾಗಿರಬದುದಾದಂಥ ವಿಷಯವನ್ನು ನಮೂದು ಮಾಡಿರುವದಾಗಿಯೂ, ಮತ್ತು ನಮೂದು ಮಾಡಲ್ಪಡುವ ಯುಕ್ತವಾದ ಬಂದು ಗಡವಿನಲ್ಲಿ ಯಾವದಾದರೂ ಮಾಡಿರುವದನ್ನು ಯಾ ಬಿಟ್ಟಿರುವದನ್ನೂ, ಸದರಿ ಉಪನಿಬಂಧನೆಗೆ ಅನುಗುಣವಾಗಿ ಸರಿಪಡಿಸುವಂತೆ ನಿಯಮಿಸುವದಾಗಿಯೂ, ಇರುವ ನೋಟೀಸನ್ನು ಯಾವ ಮನುಷ್ಯನು ಹೊಂದುತ್ತಾನೆಯೋ, ಅಂಥ ಮನುಷ್ಯನು, ಅಂಥ ಪ್ರತಿಯೊಂದು ಸಂದರ್ಭದಲ್ಲೂ, ಸದರಿ ನಿಯಾಮಕಗಳು ಅಂಥ ಕಟ್ಟಣದ ಕಟ್ಟುವಿಕೆಯು ಅಂಥ ಯಾವದಾದರು ಉಪನಿಬಂಧನೆಗೆ ವಿರುದ್ಧವಾಗಿರಬಹುದಾದ ಅಂಶಗಳಿಗೆ ಎಷ್ಟರಮಟ್ಟಿಗೆ ಸಂಬಂಧಿಸುತ್ತವೋ, ಅಷ್ಟರ ಮಟ್ಟಿಗೆ, ಅಂಥ ನೋಟೀಸಿನಲ್ಲಿ ನಮೂದಾದ ವಾಯಿದೆಯೊಳಗಾಗಿ, ಅದರಲ್ಲಿನ ನಿಯಾಮಕಗಳೊಂದೊಂದರ ಮೇರಿಗೂ, ನಡೆದುಕೊಳ್ಳತಕ್ಕದ್ದು.

ತಿದ್ದುಪಾಡುಗಳು ಪೂರೈಸಿದ ಬಗ್ಯೆ ನೋಟಿಸ್.

29. ಅಂಥ ಯಾವದಾದರೂ ನಿಯಾಮಕದ ಮೇರಿಗೆ ನಡಿಸಲ್ಪಟ್ಟ ಕೆಲಸವು ಪೂರೈಸಿದ ಮೇಲೆ, ಬಂದು ನ್ಯಾಯವಾದ ವಾಯಿದೆಯೊಳಗಾಗಿ, ಅಂಥ ಮನುಷ್ಯನು ಜೇರ್ಮೆರ್ರಿಗೆ ಆಫೀಸಿನಲ್ಲಿ, ಬರಹಮೂಲಕ ಅಂಥ ಕೆಲಸವು ಪೂರೈಸಿದ ಬಗ್ಯೆ ನೋಟಿಸನ್ನು ತಂದು ಕೊಡತಕ್ಕದ್ದು ಯಾ ಕಳುಹಿಸತಕ್ಕದ್ದು. ಅಥವಾ ತಂದುಕೊಡುವಂತೆಯಾದರೂ ಯಾ ಕಳುಹಿಸುವಂತೆಯಾದರೂ ಮಾಡತಕ್ಕದ್ದು.

ಕಟ್ಟಡಗಳು ಪೂರೈಸಿದ ಬಗ್ಯೆ ನೋಟಿಸ್.

30. ಬಂದು ಕಟ್ಟಡವನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಟ್ಟಡವನ್ನು ಕಟ್ಟಿದ್ದು ಪೂರೈಸಿದ ನಂತರ, ಬಂದು ತಿಂಗಳೊಳಗಾಗಿ, ಅಂಥ ಕಟ್ಟಡದ ಕಟ್ಟುವಿಕೆಯು ಪೂರೈಸಿದ ಬಗ್ಯೆ, ಲಿಖಿತಮೂಲಕ, ಜೇರ್ಮೆರ್ರಿಗೆ ಆಫೀಸಿನಲ್ಲಿ, ನೋಟೀಸನ್ನು ತಂದುಕೊಡತಕ್ಕದ್ದು ಯಾ ಕಳುಹಿಸಿಕೊಡತಕ್ಕದ್ದು, ಅಥವಾ ತಂದುಕೊಡುವಂತೆ ಯಾಗಲಿ ಕಳುಹಿಸಿಕೊಡುವಂತೆಯಾಗಲಿ ಮಾಡತಕ್ಕದ್ದು.

377



31. ಉದ್ದೇಶಿಸಿರುವ ಹೊಸ ಬಡಾವಣೆಗಳೆಲ್ಲೂ, ಮತ್ತು ಸಹಕಾರಿಯಾದ ಸಂದರ್ಭಗಳಿಗನುಗುಣವಾಗಿ ಪಟ್ಟಣದಲ್ಲಿ ಎಲ್ಲಿ ಸಾಧ್ಯವೋ, ಅಂಥ ದರೋಬಸ್ತು ಪ್ರದೇಶಗಳಲ್ಲಿಯೂ, ಹೊಸದಾಗಿ ಕಟ್ಟಲ್ಪಡತಕ್ಕ ಪ್ರತಿಯೊಂದು ವಾಸದ ವಹಾರವು, ಸುತ್ತಮುತ್ತಲೂ ಹೊರಗಿನ ಗಾಳಿಯ ಸಂಪರ್ಕವನ್ನುಂಟಾಗಿರುವಂತೆ ಇರತಕ್ಕದ್ದು.

32. ಯಾವನು ಮೇಲ್ಕಂಡ ಉಪನಿಬಂಧನೆಗಳ ಸಮಾಧಾನಾರ್ಥವಾಗಿ, ಒಂದು ಹೊಸ ಕಟ್ಟಡದ ಬಗ್ಗೆ ಲೈಸೆನ್ಸನ್ನು ಕೊಡಲ್ಪಟ್ಟವನಾಗಿ, ಸದರಿ ಕಟ್ಟಡವನ್ನು ಆರು ತಿಂಗಳಿಗೆ ಮೇಲ್ಪಟ್ಟುಂಥಾ ಯಾವ ಕಾಲದ ಪರಿಯಂತರವಾಗಲಿ ಪೂರೈಸದ ಇರುತ್ತಾನೋ, ಅಂಥವನು ನೋಟಿಸ್ ಜಾರಿಯಾದ ನಂತರ ಸದರಿ ಕಟ್ಟಡವು ಪೂರ್ತಿಯಾಗುವದಕ್ಕೆ, ಟ್ರಸ್ಟಿಗಳಿಂದ ಗೊತ್ತುಮಾಡಲ್ಪಡುವ ಒಂದು ನ್ಯಾಯವಾವ ಗಡುವಿನಲ್ಲಿ ಅದನ್ನು ಮುಗಿಸಿ ಪೂರೈಸತಕ್ಕದ್ದು. ತಪ್ಪಿದಲ್ಲಿ, ಲಾಗವಡಿಗೂ ಮತ್ತು ನಷ್ಟಕ್ಕೂ ಮೂಲೀಕನನ್ನು ಗುರಿಪಡಿಸಿ, ಸದರಿ ಕಟ್ಟಡವನ್ನು ಮುಗಿಸುವದಕ್ಕೂ ಮತ್ತು ಅಂಥ ಕಾಂಗಾರಿಯ ಲಾಗವಡನ್ನು ಬರಮಾಡಿಕೊಳ್ಳುವದಕ್ಕೂ, ಅಥವಾ ಸದರಿ ಕಟ್ಟಡವನ್ನು ಕಿತ್ತುಹಾಕುವದಕ್ಕೂ, ಟ್ರಸ್ಟಿಗಳವರು ಅರ್ಹರಾಗಿರುತ್ತಾರೆ.

33. ಉತ್ತಮವಾದ ಹವ ಯಾ ಆರೋಗ್ಯ, ಇವುಗಳ ನಿಮಿತ್ತವಾಗಿ ಕಟ್ಟಡವನ್ನು ರೂಪಾಂತರ ಪಡಿಸುವದಕ್ಕಾಗಲಿ ಯಾ ಗಾಳಿವಾಟವನ್ನು ಕಲ್ಪಿಸುವದಕ್ಕಾಗಲಿ, ಟ್ರಸ್ಟಿಗಳಿಂದ ಆಜ್ಞಾಪಿಸಲ್ಪಡಬಹುದಾದ ಯಾವ ಮನುಷ್ಯನಾದರು, ಆ ಮೇರಿಗೆ ಮಾಡತಕ್ಕ ಬಗ್ಗೆ ತನಿಗೆ ಚೇರ್ಮೆರಿಂದ ಕೊಡಲ್ಪಡುವ ನೋಟಿಸ್ ತಾರೀಖಿನ ಒಂದು ತಿಂಗಳೊಳಗೆ, ಅಥವಾ ಚೇರ್ಮೆರಿಗೆ ತಾಯಾ ಸಂದರ್ಭಗಳ ಮೇರೆ ಸೂಕ್ತವೆಂದು ತೋರುವಂಥ ಹೆಚ್ಚು ವಾಯಿದೆ ಒಳಗಾಗಿ, ಆ ಮೇರಿಗೆ ಮಾಡತಕ್ಕದ್ದು.

34. ಮೇಲ್ಕಂಡ ಬೈಲಾಸ್ ಯಾನೆ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡಿಯುವ ಪ್ರತಿಯೊಬ್ಬ ಮನುಷ್ಯನು 20 ರೂ ಸಾಯಿಗಳ ವರಿಗೆ ಆಗಬಹುದಾದ ಜುರ್ಮಾನೆಗೂ, ಮತ್ತು ನಡೆದುಕೊಂಡು ಬರುವ ತಪ್ಪಿತಕ್ಕೆ ಮೊದಲಿನ ತಪ್ಪು ಸ್ಥಾಪಿತವಾದ ನಂತರವಾಗಲಿ, ಅಥವಾ ನಿಬಂಧನೆಗೆ ವಿರುದ್ಧವಾಗಿ ನಡಿಯದಿರುವಂತೆ ಚೇರ್ಮೆರಿಂದ ಲಿಖಿತಮೂಲಕ ನೋಟಿಸ್ ತಲಪಿದ ನಂತರವಾಗಲಿ, ಯಾವ ದಿನ ನಿಬಂಧನೆಗೆ ವಿರುದ್ಧವಾಗಿ ನಡಿಯುವದಾಗುತ್ತೋ, ಅಂಥ ಪ್ರತಿದಿನಕ್ಕೂ 10 ರೂಪಾಯಿಗಳ ವರಿಗೆ ಜುರ್ಮಾನೆಗೂ ಗುರಿಯಾಗುವನು.

ದಂಡನೆಗಳು.

35. ಮೇಲ್ಕಂಡ ಯಾವದಾದರೂ ಉಪನಿಬಂಧನೆಗಳ ಮೇರಿಗೆ, ಯಾವದಾದರು ಮಾಡುವಿಕೆಯೆ ಆಗಲಿ ಯಾ ಮಾಡದೆ ಇರುವಿಕೆಯೆ ಆಗಲಿ, ಅಥವಾ ಯಾವದಾದರೂ ನಡವಳಿಕೆಯ ಬೈತನ್ಯತ್ವವೇ ಆಗಲಿ, ಚೇರ್ಮೆರವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯಾ ಒಪ್ಪಿಕೆಯನ್ನು, ಆಕ್ಷಯಿಸಿರುವ ಪಕ್ಷದಲ್ಲಿ, ಚೇರ್ಮೆರಿಂದ ದಸ್ತಕ ಮಾಡಲ್ಪಟ್ಟು ಅವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯ ಒಪ್ಪಿಕೆಯನ್ನು ತಿಳಿಸುವ ಯಾ ತೋರ್ಪಡಿಸುವ ಒಂದು ಲಿಖಿತ ದಸ್ತಾವೇಜು, ಅಂಥ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆ, ಯಾ ಒಪ್ಪಿಕೆಗೆ ಸಾಕಾದ ಪ್ರಧಾನ ಸಾಕ್ಷ್ಯವಾಗಿರತಕ್ಕದ್ದು

ಅಧಿಕಾರ, ಕರ್ತವ್ಯ ಯ ಕೆಲಸದ ಚಲಾವಣೆ ಬಗ್ಗೆ ಸಾಕ್ಷ್ಯವು.

ಈ ಉಪನಿಬಂಧನೆಗಳ ಮೇರಿಗೆ, ಪರಿಮಾಣಗಳು, ವಿಧಿಸಲ್ಪಟ್ಟಿರುವ ದರೋಬಸ್ತು ಸಂದರ್ಭಗಳೆಲ್ಲೂ ಸದರಿ ಪರಿಮಾಣಗಳನ್ನು ಆ ಬಗ್ಗೆ ದರಬಾಸ್ತು ಮಾಡಲ್ಪಟ್ಟಿಲ್ಲಿ, ಎದಲಾಯಿಸುವದಕ್ಕೆ ಅಪ್ಪಣೆ ಕೊಡಲು ಚೇರ್ಮೆರಿಗೆ ಅಧಿಕಾರವಿರತಕ್ಕದ್ದು.

---

Mysore Government Central Press, Bangalore.—1901.